ದುಃಖದ ಮಾತೇ ಸರಿ. ಮಾನವಾಧಿಕಾರದ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಆ್ಯಕ್ಟಿವಿಸ್ಟುಗಳ ಬಗ್ಗೆ ಸರ್ಕಾರಗಳಿಗೆ ಅಸಹನೆ ಏಕಿರಬಹುದು?

ಆದಿವಾಸಿಗಳ, ಕಾರ್ಮಿಕರ, ದಲಿತ-ಶೋಷಿತರ ಪರವಾಗಿ ಮಾತನಾಡುವ ಆಕ್ಟಿವಿಸ್ಟುಗಳು – ಶೋಷಿತರ ಜೊತೆ ಅವರ ಪರವಾಗಿ ಇರುತ್ತಲೇ, ಶೋಷಿತರಿಗೂ ನ್ಯಾಯವ್ಯವಸ್ಥೆಗೂ ಒಂದು ಸೇತುವೆಯಾಗಿ ಕೆಲಸ ಮಾಡುತ್ತಾರೆ. ಬುದ್ಧಿಜೀವಿಗಳಾದ ಈ ಆ್ಯಕ್ಟಿವಿಸ್ಟುಗಳಿಗೆ ಮುಖ್ಯಧಾರೆಯ ವಿಚಾರವಾದದ ನೆಲೆಗಳು ಗೊತ್ತು; ಸಂವಿಧಾನ – ಕಾನೂನು – ಹಕ್ಕುಗಳು ಗೊತ್ತು. ಹೀಗಾಗಿ ವಂಚಿತರಿಗಿಲ್ಲದ ಭಾಷೆ ಮತ್ತು ಕಾನೂನನ್ನು ತಮ್ಮ ಪರವಾಗಿ ವಾದಿಸುವ ಸವಲತ್ತು ಇವರುಗಳಿಗಿದೆ. ಇವರುಗಳ ಜ್ಞಾನ ಮತ್ತು ಪ್ರತಿಭೆಗೆ ಮುಖ್ಯಧಾರೆಯ ಜನ-ಸಂಸ್ಥೆಗಳು ಸಾಕಷ್ಟು ಹಣವನ್ನು ಕೊಟ್ಟು ಅವರನ್ನು ತಮ್ಮ ಪರವಾಗಿ ಕೆಲಸ ಮಾಡಲು ಇಟ್ಟುಕೊಳ್ಳಬಹುದಾದರೂ, ಇವರುಗಳು ಮಾರಾಟಕ್ಕೆ ಲಭ್ಯವಿಲ್ಲ. ದುಡ್ಡು ಆಮಿಷಗಳಿಂದ ಅವರನ್ನು ಒಲಿಸುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ಎಲೀಟ್ – ಮೇಲ್ವರ್ಗದ ಭಾಷೆಯನ್ನು ಮಾತನಾಡುತ್ತಲೇ, ಅವರುಗಳು ಉಪಯೋಗಿಸುವ ಪರಿಕರಗಳನ್ನು ಉಪಯೋಗಿಸುತ್ತಲೇ ಅವರನ್ನು ಎದುರಿಸುವ ಕೆಲಸವನ್ನು ಮಾಡುತ್ತಾರೆ. ವಿಚಾರಧಾರೆ ಮತ್ತು ಬದ್ಧತೆ ಆಳವಾಗಿ ಇರುವುದರಿಂದ – ಯಾವುದೇ ಆಧುನಿಕ ಮತ್ತು ರ್‍ಯಾಷನಲ್ ಎನ್ನಿಸುವಂತಹ ತರ್ಕಕ್ಕೆ ಅವರುಗಳನ್ನು ಕರೆತರುವುದೂ ಸಾಧ್ಯವಿಲ್ಲ.

ಹೀಗಾಗಿ ಆ್ಯಕ್ಟಿವಿಸ್ಟುಗಳು ಸರ್ಕಾರಕ್ಕೂ ಮತ್ತು ಮಾರುಕಟ್ಟೆಯಲ್ಲಿ ಪ್ರಬಲವಾಗಿರುವ ಕಾರ್ಪೊರೇಟ್ ಲೋಕಕ್ಕೂ ಕಿರಿಕಿರಿಯ ಮೂಲವಾಗುತ್ತಾರೆ. ದೇಶದ ಕಾನೂನು ವ್ಯವಸ್ಥೆಯ ಅರಿವಿರುವ ಇವರುಗಳು ಅದೇ ನ್ಯಾಯಬದ್ಧ ತಂತ್ರಗಳನ್ನುಪಯೋಗಿಸಿ, ಆಗಬಹುದಾದ ಕೆಲಸದೆದುರು ಮಾನವ ಹಕ್ಕುಗಳ ಸ್ಪೀಡ್‌ಬ್ರೇಕರ್ ನಿರ್ಮಿಸುತ್ತಾರೆ. ಭೀಮಾ ಕೋರೆಗಾಂವ್ ಪ್ರಕರಣ ಆಗುವುದಕ್ಕೆ ಮುನ್ನ ಹೆಚ್ಚು ಸುದ್ದಿಯಲ್ಲಿಲ್ಲದ ಸರಳಜೀವಿ ಸ್ಟಾನ್ ಸ್ವಾಮಿಯ ಮಹತ್ವವೇನು? ಯಾಕೆ ಸರ್ಕಾರಕ್ಕೆ ಅವರ ವಿರುದ್ಧ ಇಷ್ಟು ತೀವ್ರ ಆಕ್ರೋಶವಿತ್ತು? ಎನ್ನುವುದಕ್ಕೆ ಕಾರಣ ಹುಡುಕಿದಾಗ – ಅವರು ಕೆಲಸ ಮಾಡುತ್ತಿರುವ ಪ್ರಾಂತದಲ್ಲಿ ಖನಿಜ ಸಂಪತ್ತು – ಮುಖ್ಯವಾಗಿ ವಿದ್ಯುತ್ ಕ್ಷೇತ್ರಕ್ಕೆ ಬೇಕಾದ ಕಲ್ಲಿದ್ದಲಿನ ಗಣಿಗಾರಿಕೆ ಸಾಧ್ಯತೆಗಳೂ – ಅದಕ್ಕೆ ಆದಿವಾಸಿಗಳ ವಿರೋಧವೂ, ಅವರಿಗೆ ಸ್ಟಾನ್ ಸ್ವಾಮಿಯ ಬೆಂಬಲವೂ ಕಾಣುತ್ತದೆ. ಚತ್ತೀಸ್‌ಗಡದಲ್ಲಿಯೂ ಅದೇ ಕಥೆ. ಹೀಗಾಗಿ ಮಾರುಕಟ್ಟೆಯ ಹಿತಾಸಕ್ತಿಗಳೂ ಮತ್ತು ಸರ್ಕಾರವೂ ಒಂದೆಡೆ ಸೇರುವ ಪ್ರಕ್ರಿಯೆ ನಮಗೆ ಕಾಣಿಸುತ್ತದೆ.

ಗಾಂಧಿವಾದಿಗಳು, ಅಂಬೇಡ್ಕರ್‌ವಾದಿಗಳು, ಎಡಪಂಥೀಯರು, ಕಾರ್ಮಿಕ ಸಂಘಟಕರು, ಆದಿವಾಸಿ ಸಂಘಟಕರು, ಮಾನವ ಹಕ್ಕುಗಳಿಗಾಗಿ ಹೋರಾಡುವವರು – ಈ ಎಲ್ಲರೂ ಭಿನ್ನ ವಿಚಾರಧಾರೆಯನ್ನು ಹೊಂದಿರುತ್ತಾರೆ. ಈ ವಿಚಾರಧಾರೆಗಳಲ್ಲಿ ಏಕತೆ ಇಲ್ಲ. ಆದರೆ ಭಿನ್ನ ವಿಚಾರಧಾರೆ ಮತ್ತು ನೆಲೆಯಲ್ಲಿ ಕೆಲಸ ಮಾಡುತ್ತಿರುವವರನ್ನು ಒಂದೇ ಗುಂಪಿನಲ್ಲಿ ಹಾಕಿ ಎಲ್ಲರನ್ನೂ ಅರ್ಬನ್ ನಕ್ಸಲ್ ಎನ್ನುವುದರಲ್ಲಿ ಅರ್ಥವಿದೆಯೇ? ದಶಕದ ಹಿಂದೆ ಕೊಟ್ಟ ಭಾಷಣದ ಮೇಲೆ ಕಾನೂನಿನ ಪ್ರಕ್ರಿಯೆಗೆ ಒಳಪಡಿಸುತ್ತಿರುವ ಅರುಂಧತಿ ರಾಯ್ ಅಷ್ಟು ಅಪಾಯಕಾರಿ ವ್ಯಕ್ತಿಯೇ?

ಇದು ಕುತೂಹಲದ ಪ್ರಶ್ನೆ. ಈ ಆಪಾದಿತರಲ್ಲಿರುವ ಸಮಾನತೆ ಒಂದೇ. ಅವರಿಗೆ ಸರ್ಕಾರದ ಮತ್ತು ಕಾರ್ಪೊರೇಟ್ ಜಗತ್ತಿನ ಭಾಷೆ ಗೊತ್ತು. ಅದೇ ಭಾಷೆಯನ್ನು ಉಪಯೋಗಿಸಿ ಹೋರಾಡಬಲ್ಲರು. ಇವರುಗಳಲ್ಲಿ ಪ್ರಮುಖರಾದವರನ್ನು ದಮನ ಮಾಡಿದರೆ ಅವರು ತಮ್ಮ ಬಚಾವಿನತ್ತ ಗಮನವನ್ನು ಹರಿಸುತ್ತಾರೆ. ಇದರಿಂದ ಇತರ ಆ್ಯಕ್ಟಿವಿಸ್ಟುಗಳಿಗೂ ಒಂದು ಸಂದೇಶ ತಲುಪುತ್ತದೆ. ಎಲ್ಲರನ್ನೂ ಪ್ರಗತಿಯ ವಿರೋಧಿಗಳೆಂದೂ, ಜನಶತ್ರುವೆಂದೂ ಸರ್ಕಾರ ಬಣ್ಣಿಸಬಹುದು. ಹೆನ್ರಿಕ್ ಇಬ್ಸೆನ್ 'ಪಬ್ಲಿಕ್ ಎನಿಮಿ' ಎನ್ನುವ ನಾಟಕವನ್ನು ಬರೆದಿದ್ದ. ಅದರ ಮುಖ್ಯ ಪಾತ್ರಧಾರಿಯಂತೆ ಈ ಎಲ್ಲರೂ ಕಾಣಿಸುತ್ತಾರೆ.

ಆಪಾದಿತರ ಹಿನ್ನೆಲೆ, ಜೀವನಶೈಲಿ, ವಿಚಾರವಾದ, ಕೆಲಸ ಮತ್ತು ಈ ಕಾಂಡದಲ್ಲಾಗಿರುವ ವಿವರಗಳನ್ನು ಗ್ರಹಿಸಿ ಅಲ್ಪಾ ಬರೆದಿರುವ ಈ ಪುಸ್ತಕ ಮೌಲಿಕವಾದದ್ದು. ಇದರಿಂದ ಈ ಕಾಂಡದ ವಿವರಗಳು ಸಿಗುವುದು ಒಂದೆಡೆಯಾದರೆ. ಸರ್ಕಾರದ ದಮನದ ರೀತಿಗಳನ್ನು ಅರ್ಥಮಾಡಿಕೊಳ್ಳುವುದೂ ಸಾಧ್ಯವಾಗುತ್ತದೆ. ●